# 70/2025-K

| Question Booklet Alpha Code | A | Question Booklet Serial Number |
|---|---|---|

| Total Number of Questions : 100 | Time : 1 Hour 30 Minutes |
|---|---|
| Maximum Marks : 100 | |

A

## INSTRUCTIONS TO CANDIDATES

1. The question paper will be given in the form of a Question Booklet. There will be four versions of question booklets with question booklet Alpha Code viz. A, B, C & D.
2. The Question Booklet Alpha Code will be printed on the top left margin of the facing sheet of the question booklet.
3. The Question Booklet Alpha Code allotted to you will be noted in your seating position in the Examination Hall.
4. If you get a question booklet where the Alpha Code does not match to the allotted Alpha Code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your question booklet is unnumbered, please get it replaced by new question booklet with same Alpha Code.
6. The question booklet will be sealed at the middle of the right margin. Candidate should not open the question booklet until the indication is given to start answering.
7. Immediately after the commencement of the examination, the candidate should check that the question booklet supplied to him/her contains all the 100 questions in serial order. The question booklet does not have unprinted or torn or missing pages and if so, he/she should bring it to the notice of the Invigilator and get it replaced by a complete booklet with same Alpha Code. This is most important.
8. A blank sheet of paper is attached to the question booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices (A), (B), (C) and (D) having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3$^{rd}$ mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

DO NOT WRITE HERE

1. ಕೆಳಗೆ ನೀಡಲಾದ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

1. ಗುರುವಾಯೂರ್ ಸತ್ಯಾಗ್ರಹ

2. ಈಳವ ಸ್ಮಾರಕ

3. ಪಾಲಿಯಂ ಸತ್ಯಾಗ್ರಹ

4. ವೈಕಮ್ ಸತ್ಯಾಗ್ರಹ

(A) 2, 1, 3, 4

(B) 2, 4, 1, 3

(C) 3, 2, 1, 4

(D) 3, 1, 2, 4

2. ಬ್ರಿಟಿಷ್ ವೈಸ್‌ರಾಯ್‌ನ ಕಾರ್ಯಕಾರಿ ಮಂಡಳಿಗೆ ರಾಜೀನಾಮೆ ನೀಡಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದ ಮಲಯಾಳಿ ಯಾರು?

(A) ಜಿ. ಪಿ. ಪಿಳ್ಳೈ

(B) ಕೆ. ಮಾಧವನ್ ನಾಯರ್

(C) ಚೆಟ್ಟೂರ್ ಶಂಕರನ್ ನಾಯರ್

(D) ಕೆ. ಕೇಳಪ್ಪನ್

3. 1900ರಲ್ಲಿ ಎರಡನೇ ಈಳವ ಸ್ಮಾರಕವನ್ನು ಯಾವ ವೈಸ್ರಾಯ್‌ಗೆ ಸಮರ್ಪಿಸಲಾಯಿತು?

(A) ಡಫರಿನ್

(B) ಲಾರ್ಡ್ ಕರ್ಜನ್

(C) ಮೌಂಟ್ ಬ್ಯಾಟನ್

(D) ಮೇಯೊ

4. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಿಯನ್ನು ಹುಡುಕಿ

1. ಆತ್ಮ ವಿದ್ಯಾ ಸಂಘ – ವಾಗ್‌ಭಟಾನಂದನ್

2. ವಕ್ಕಂ ಅಬ್ದುಲ್ ಖಾದರ್ ಮೌಲವಿ – ಸ್ವದೇಶಾಭಿಮಾನಿ

3. ಕುರಿಯಾಕೋಸ್ ಎಲಿಯಾಸ್ ಚಾವರ – ಆತ್ಮಾನುತಪಂ

(A) 1, 2 ಸರಿ

(B) 2, 3 ಸರಿ

(C) 1 ಮಾತ್ರ ಸರಿ

(D) ಎಲ್ಲಾ ಸರಿಯಾಗಿದೆ

5. ಸಮತ್ಯ ಸಮಾಜ ಎಂಬ ಸುಧಾರಣಾ ಚಳುವಳಿಯನ್ನು ಪ್ರಾರಂಭಿಸಿದ ಸಮಾಜ ಸುಧಾರಕ ಯಾರು?

(A) ವೈಕುಂಠ ಸ್ವಾಮಿಗಳು

(B) ಚಟ್ಟಂಬಿ ಸ್ವಾಮಿಗಳು

(C) ವಾಗ್‌ಭಟಾನಂದನ್

(D) ಅಯ್ಯಂಕಾಳಿ

6. 1916 ರಲ್ಲಿ ಭಾರತದ ಪುಣೆಯಲ್ಲಿ ಮೊದಲ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದವರು ಯಾರು?

(A) ಜ್ಯೋತಿ ರಾವ್‌ಪುಲೆ

(B) ಡಿ. ಕೆ. ಕರ್ವೇ

(C) ಬಾಲ ಗಂಗಾಧರ ತಿಲಕ್

(D) ಪಂಡಿತಾ ರಮಾಬಾಯಿ

7. ಗಾಂಧೀಜಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಅಸಹಕಾರ ಚಳುವಳಿಯನ್ನು ನಿಲ್ಲಿಸಲು ಕಾರಣವೇನು?

(A) ಪೂನಾ ಒಪ್ಪಂದ

(B) ಚೌರಿ ಚೌರಾ ಘಟನೆ

(C) ಮೊದಲ ದುಂಡು ಮೇಜಿನ ಸಭೆ

(D) ಎರಡನೇ ದುಂಡು ಮೇಜಿನ ಸಭೆ

8. ಸನ್ಯಾಸಿ ದಂಗೆ ಎಲ್ಲಿ ನಡೆಯಿತು?

(A) ಬಂಗಾಳ

(B) ಬಿಹಾರ್

(C) ಪಂಜಾಬ್

(D) ಮಹಾರಾಷ್ಟ್ರ

9. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಯಾವ ಅಧಿವೇಶನದಲ್ಲಿ ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ) ನಿರ್ಣಯವನ್ನು ಅಂಗೀಕರಿಸಲಾಯಿತು?

(A) ಕಾನ್ಪುರ

(B) ಬಾಂಬೆ

(C) ಮದ್ರಾಸ್

(D) ದೆಹಲಿ

10. ಬಂಗಾಳದ ಏಷ್ಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿದವರು ಯಾರು?

(A) ವಾರೆನ್ ಹೇಸ್ಟಿಂಗ್ಸ್

(B) ಎಂ. ಜಿ. ರಾನಡೆ

(C) ವಿಲಿಯಂ ಜೋನ್ಸ್

(D) ರವೀಂದ್ರನಾಥ ಟ್ಯಾಗೋರ್

11. ಸಂಸತ್ತಿನ ಯಾವ ಸದನದಲ್ಲಿ ಹಣ ಮಸೂದೆಯನ್ನು ಮೊದಲು ಮಂಡಿಸಲಾಗುತ್ತದೆ?

(A) ರಾಜ್ಯಸಭೆಯಲ್ಲಿ

(B) ಲೋಕಸಭೆಯಲ್ಲಿ

(C) ಇದನ್ನು ರಾಜ್ಯಸಭೆ ಅಥವಾ ಲೋಕಸಭೆಯಲ್ಲಿ ಪರಿಚಯಿಸಬಹುದು

(D) ಸಂವಿಧಾನವು ಈ ವಿಷಯಕ್ಕೆ ನಿರ್ದಿಷ್ಟವಾಗಿ ಅವಕಾಶ ನೀಡುವುದಿಲ್ಲ

12. ಯಾವುದೇ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದರೆ, ಅವುಗಳನ್ನು ಪುನ:ಸ್ಥಾಪಿಸಲು 226 ನೇ ವಿಧಿಯ ಅಡಿಯಲ್ಲಿ ಯಾವ ನ್ಯಾಯಾಲಯವನ್ನು ಸಂಪರ್ಕಿಸಬಹುದು?

(A) ಸರ್ವೋಚ್ಚ ನ್ಯಾಯಾಲಯ

(B) ಉಚ್ಚ ನ್ಯಾಯಾಲಯ

(C) ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಎರಡನ್ನೂ ಸಂಪರ್ಕಿಸಬಹುದು

(D) ಜಿಲ್ಲಾ ನ್ಯಾಯಾಲಯ

13. ಯಾವ ಸಾಂವಿಧಾನಿಕ ತಿದ್ದುಪಡಿಯು ಮತದಾನದ ವಯಸ್ಸನ್ನು 21 ರಿಂದ 18 ವರ್ಷಕ್ಕೆ ಇಳಿಸಿತು?

(A) 61 ನೇ ತಿದ್ದುಪಡಿ

(B) 42 ನೇ ತಿದ್ದುಪಡಿ

(C) 73 ನೇ ತಿದ್ದುಪಡಿ

(D) 76 ನೇ ತಿದ್ದುಪಡಿ

14. ಶಿಕ್ಷಣವು ಯಾವ ಪಟ್ಟಿಗೆ ಸಂಬಂಧಿಸಿದೆ?

(A) ಸಮವರ್ತಿ ಪಟ್ಟಿ

(B) ಕೇಂದ್ರ ಪಟ್ಟಿ

(C) ರಾಜ್ಯ ಪಟ್ಟಿ

(D) ಇವುಗಳಲ್ಲಿ ಯಾವುದೂ ಅಲ್ಲ

15. ರಾಜ್ಯಸಭೆಯ ಬಗ್ಗೆ ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆಯನ್ನು ಹುಡುಕಿ.

1. ಇದನ್ನು ರಾಜ್ಯಗಳ ಪರಿಷತ್ತು ಎಂದು ಕರೆಯಲಾಗುತ್ತದೆ

2. ಶಾಶ್ವತ ಸದನ

3. ಸದನದ ಅವಧಿ ಐದು ವರ್ಷಗಳು

4. ಇದರ ಅಧ್ಯಕ್ಷತೆಯನ್ನು ಸ್ಪೀಕರ್ ವಹಿಸುತ್ತಾರೆ

(A) ಎಲ್ಲವೂ ಸರಿಯಾಗಿವೆ

(B) ಕೇವಲ 2 ಸರಿಯಾಗಿದೆ

(C) 1 ಮತ್ತು 2 ಸರಿಯಾಗಿವೆ

(D) 3 ಮತ್ತು 4 ಸರಿಯಾಗಿವೆ

16. ಪ್ರಧಾನ ಮಂತ್ರಿಗಳು ವಿಳಿಂಜಮ್ ಅಂತರರಾಷ್ಟ್ರೀಯ ವಾಣಿಜ್ಯ ಬಂದರನ್ನು ಯಾವ ದಿನಾಂಕದಂದು ರಾಷ್ಟ್ರಕ್ಕೆ ಅರ್ಪಿಸಿದರು?

(A) ಮೇ 2, 2025

(B) ಮೇ 3, 2025

(C) ಮೇ 4, 2025

(D) ಮೇ 6, 2025

17. ಏಪ್ರಿಲ್2025 ರಲ್ಲಿ ಯಾವ ಅಮೇರಿಕನ್ ಉಪಾಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದರು?

(A) ಡೊನಾಲ್ಡ್ ಟ್ರಂಪ್

(B) ಕಮಲಾ ಹ್ಯಾರಿಸ್

(C) ಮೈಕ್ ವಾಲ್ಟ್ಸ್

(D) ಜೆ. ಡಿ. ವ್ಯಾನ್ಸ್

18. ಸ್ವಾತ್ವಂತ್ರ್ಯದ ನಂತರ ರಾಜಪ್ರಭುತ್ವದ ರಾಜ್ಯಗಳನ್ನು ಭಾರತೀಯ ಒಕ್ಕೂಟಕ್ಕೆ ವಿಲೀನಗೊಳಿಸುವಲ್ಲಿ ಜವಾಹರಲಾಲ್ ನೆಹರು ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರೊಂದಿಗೆ ನಿರ್ಣಾಯಕ ಪಾತ್ರ ವಹಿಸಿದ ಮಲಯಾಳಿ.

(A) ವಿ. ಪಿ. ಮೆನನ್

(B) ಕೆ. ಆರ್.ನಾರಾಯಣನ್

(C) ಜಾನ್ ಮಥಾಯಿ

(D) ಕೆ. ಪಿ. ಕೇಶವ ಮೆನನ್

19. ಭಾರತೀಯ ಯೋಜನಾ ಆಯೋಗದ ಮೊದಲ ಉಪಾಧ್ಯಕ್ಷರು

(A) ಟಿ. ಟಿ. ಕೃಷ್ಣಮಾಚಾರಿ

(B) ಗುಲ್ಜಾರಿಲಾಲ್ ನಂದಾ

(C) ಜವಾಹರಲಾಲ್ ನೆಹರು

(D) ಸಿ. ಡಿ. ದೇಶಮುಖ್

20. 1954ರಲ್ಲಿ ಭಾರತ ಯಾವ ದೇಶದೊಂದಿಗೆ ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿತು?

(A) ಪಾಕಿಸ್ತಾನ

(B) ಆಫ್ಘಾನಿಸ್ತಾನ

(C) ಚೀನಾ

(D) ನೇಪಾಳ

21. ಭಾರತದ ಕ್ಷಿಪಣಿ ಮನುಷ್ಯ ಎಂದು ಯಾರನ್ನು ಕರೆಯಲಾಗುತ್ತದೆ?

(A) ವಿಕ್ರಮ್ ಸಾರಾಭಾಯಿ

(B) ಡಾ. ರಾಜಾ ರಾಮಣ್ಣ

(C) ಹೋಮಿ ಜಹಾಂಗೀರ್ ಭಾಭಾ

(D) ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

22. ಭಾರತದಲ್ಲಿ ಭಾಷೆಯ ಆಧಾರದ ಮೇಲೆ ರೂಪುಗೊಂಡ ಮೊದಲ ರಾಜ್ಯ

(A) ಆಂಧ್ರ ಪ್ರದೇಶ

(B) ತಮಿಳುನಾಡು

(C) ಗುಜರಾತ್

(D) ಕರ್ನಾಟಕ

23. ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ

(A) ಗಾಂಧಿನಗರ

(B) ವಯನಾಡು

(C) ವಾರಣಾಸಿ

(D) ರಾಯ್‌ಬರೇಲಿ

24. ಇಸ್ರೋದ ಪ್ರಸ್ತುತ ಅಧ್ಯಕ್ಷರು

(A) ಡಾ. ವಿ. ನಾರಾಯಣನ್

(B) ಡಾ. ಎಸ್. ಸೋಮನಾಥ್

(C) ಡಾ. ಕೆ. ಶಿವನ್

(D) ಡಾ. ಜಿ. ಮಾಧವನ್ ನಾಯರ್

25. ಭಾರತದ ವಿವಿಧ ನದಿ ಜಲಾನಯನ ಯೋಜನೆಗಳು ಮತ್ತು ಅವುಗಳ ನದಿಗಳನ್ನು ಕೆಳಗೆ ನೀಡಲಾಗಿದೆ. ಸರಿಯಾದ ಜೋಡಿಗಳನ್ನು ಹುಡುಕಿ.

| | | |
|---|---|---|
| (i) ಹಿರಾಕುಡ್ | – | 1. ನರ್ಮದಾ |
| (ii) ಸರ್ದಾರ್ ಸರೋವರ | – | 2. ಗೋದಾವರಿ |
| (iii) ಕೃಷ್ಣರಾಜಸಾಗರ | – | 3. ಮಹಾನದಿ |
| (iv) ನಿಜಾಮಸಾಗರ | – | 4. ಕಾವೇರಿ |

(A) i – 1, ii – 4, iii – 3, iv – 2

(B) i – 2, ii – 4, iii – 3, iv – 1

(C) i – 3, ii – 1, iii – 4, iv – 2

(D) i – 4, ii – 2, iii – 3, iv – 1

26. ಕೇರಳದ ಅತಿ ದೊಡ್ಡ ಜೀವಗೋಲ ಮೀಸಲು (ಬಯೋಸ್ಫಿಯರ್ ರಿಸರ್ವ್)

(A) ಅಗಸ್ತ್ಯಮಾಲಾ

(B) ನೀಲಗಿರಿ

(C) ಸೈಲೆಂಟ್ ವ್ಯಾಲಿ

(D) ಮನಾರ್ ಕೊಲ್ಲಿ

27. "ಪುನರ್ಗೆಹ್ಯಾಮ್'' ಯೋಜನೆಯ ಫಲಾನುಭವಿಗಳು ಯಾರು?

(A) ಗುಡ್ಡಗಾಡು ಪ್ರದೇಶಗಳಲ್ಲಿ ವಿಪತ್ತಿನಿಂದ ಪೀಡಿತರಾದವರು

(B) ಮೀನುಗಾರ ಕುಟುಂಬಗಳು

(C) ವೃದ್ಧರು

(D) ಅಂಗವಿಕಲರು

28. ತಿರುವಾಂಕೂರಿನಲ್ಲಿ ಮೊದಲ ರೈಲು ಮಾರ್ಗ

(A) ಬೇಪೋರ್ – ತಿರೂರ್

(B) ಕೊಲ್ಲಂ – ತಿರೂರ್

(C) ಬೇಪೋರ್ – ಶೆಂಕೋಟ್ಟಾ

(D) ಕೊಲ್ಲಂ – ಶೆಂಕೋಟ್ಟಾ

29. ಈ ಕೆಳಗಿನವುಗಳಲ್ಲಿ ಯಾವುದು ಹಿಮಾಲಯದಲ್ಲಿರುವ ಹಿಮಾದ್ರಿ ಪರ್ವತ ಶ್ರೇಣಿಯ ಲಕ್ಷಣವಲ್ಲ?

(i) ಇದು ವಿಶ್ವದಲ್ಲೇ ಅತಿ ಹೆಚ್ಚು ಮಳೆಯನ್ನು ಪಡೆಯುತ್ತದೆ

(ii) ಇದು ವಿಶ್ವದಲ್ಲೇ ಅತಿ ಹೆಚ್ಚು ಸಂಖ್ಯೆಯ ಶಿಖರಗಳನ್ನು ಹೊಂದಿದೆ

(iii) ಇದು ಹಿಮದಿಂದ ಆವೃತವಾದ ಪರ್ವತಗಳನ್ನು ಹೊಂದಿದೆ

(iv) ಇದು ದಿಬ್ಬಗಳು ಎಂದು ಕರೆಯಲ್ಪಡುವ ಸಮತಟ್ಟಾದ ಕಣಿವೆಗಳನ್ನು ಹೊಂದಿದೆ

(A) (i) ಮತ್ತು (ii) ಗುಣಲಕ್ಷಣಗಳಲ್ಲ

(B) (ii) ಮತ್ತು (iii) ಗುಣಲಕ್ಷಣಗಳಲ್ಲ

(C) (i) ಮತ್ತು (iv) ಗುಣಲಕ್ಷಣಗಳಲ್ಲ

(D) (iii) ಮತ್ತು (iv) ಗುಣಲಕ್ಷಣಗಳಲ್ಲ

30. ಮಲಬಾರ್‌ನಲ್ಲಿ ಮೊದಲ ಡೀಸೆಲ್ ವಿದ್ಯುತ್ ಸ್ಥಾವರ

(A) ಬ್ರಹ್ಮಪುರಂ

(B) ನಲ್ಲಾಲಂ

(C) ಕಾಯಂಕುಳಂ

(D) ಮೂಲಮಟ್ಟಂ

31. 2027 ರ ಒಲಂಪಿಕ್ ಇ–ಸ್ಪೋರ್ಟ್ಸ್ ಆಟಗಳನ್ನು ಯಾವ ದೇಶ ಆಯೋಜಿಸುತ್ತದೆ?

(A) ಸೌದಿ ಅರೇಬಿಯಾ

(B) ಕೆನಡಾ

(C) ಬ್ರಿಟನ್

(D) ಚೀನಾ

32. ಕೇರಳದ ರಾಷ್ಟ್ರೀಯ ಉದ್ಯಾನವನಗಳ ಕುರಿತು ಈ ಕೆಳಗಿನ ಮಾಹಿತಿಯನ್ನು ಸರಿಯಾದ ಕ್ರಮದಲ್ಲಿ ಜೋಡಿಸಿರಿ:

| | |
|---|---|
| (i) ಪಾಂಪಾಡುಮ್ ಶೋಲಾ | 1. ನೀಲಗಿರಿ |
| (ii) ಮತಿಕೆಟ್ಟಾನ್ ಶೋಲಾ | 2. ನೀಲಗಿರಿ ಥಾರ್ |
| (iii) ಇರವಿಕುಳಂ | 3. ಅತ್ಯಂತ ಚಿಕ್ಕ ರಾಷ್ಟ್ರೀಯ ಉದ್ಯಾನವನ |
| (iv) ಸೈಲೆಂಟ್ ವ್ಯಾಲಿ | 4. 2003 ರಲ್ಲಿ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಲಾಯಿತು |

(A) i – 4, ii – 1, iii – 2, iv – 3

(B) i – 2, ii – 4, iii – 3, iv – 1

(C) i – 1, ii – 3, iii – 4, iv – 2

(D) i – 3, ii – 4, iii – 2, iv – 1

33. ಪ್ರಾದೇಶಿಕ ಮಾರುತಗಳು ಪ್ರಪಂಚದ ಅನೇಕ ಭಾಗಗಳಲ್ಲಿನ ಸ್ಥಳೀಯ ತಾಪಮಾನ ಮತ್ತು ಒತ್ತಡದ ವ್ಯತ್ಯಾಸಗಳಿಂದ ಉಂಟಾಗುವ ಮಾರುತಗಳಾಗಿವೆ. ಉತ್ತರ ಭಾರತದ ಬಯಲು ಪ್ರದೇಶದ ಮೇಲೆ ಬೀಸುವ ಪ್ರಾದೇಶಿಕ ಮಾರುತಗಳನ್ನು ಏನೆಂದು ಕರೆಯಲಾಗುತ್ತದೆ?

(A) ಫೊಯೆನ್

(B) ಲೂ

(C) ಹರ್ಮಟ್ಟನ್

(D) ಚಿನೂಕ್

34. ಪೆರಿಯಾರ್ ನದಿಯ ಬಗ್ಗೆ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ.

1. ಇದು ಕೇರಳದ ಅತಿ ಉದ್ದದ ನದಿ ಮತ್ತು ಇದನ್ನು 'ಕೇರಳದ ಜೀವನಾಡಿ' ಎಂದೂ ಕರೆಯಲಾಗುತ್ತದೆ
2. ಇದನ್ನು ಪ್ರಾಚೀನ ಕಾಲದಲ್ಲಿ ಬ್ಯಾರಿಸ್ ಎಂದು ಕರೆಯಲಾಗುತ್ತಿತ್ತು.
3. ಈ ನದಿಯು ಪಶ್ಚಿಮ ಘಟ್ಟಗಳ ಭಾಗವಾಗಿರುವ ತಮಿಳುನಾಡಿನ ಸುಂದರಮಲೆಯಲ್ಲಿರುವ ಶಿವಗಿರಿ ಬೆಟ್ಟಗಳಿಂದ ಹುಟ್ಟುತ್ತದೆ.
4. ಮುತ್ತಿರಪ್ಪುಳ ನದಿಯು ಈ ನದಿಯ ಉಪನದಿಯಾಗಿದೆ

(A) 1, 3, 4 ಸರಿ

(B) 1, 2, 3 ಸರಿ

(C) 2, 3, 4 ಸರಿ

(D) 1, 2, 4 ಸರಿ

35. ಕೆ – ಸ್ಮಾರ್ಟ್ (K–SMART) ಯಾವುದಕ್ಕೆ ಸಂಬಂಧಿಸಿದೆ?

(A) ನಗರವಾಸಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಯೋಜನೆ

(B) ಸರ್ಕಾರಿ ಶಾಲೆಗಳ ಶೈಕ್ಷಣಿಕ ಮೂಲಸೌಕರ್ಯವನ್ನು ಸುಧಾರಿಸುವ ಯೋಜನೆ

(C) ಕೇರಳದ ಕೈಗಾರಿಕಾ ವಲಯಗಳನ್ನು ಅಭಿವೃದ್ಧಿಪಡಿಸುವ ಯೋಜನೆ

(D) ಸ್ಥಳೀಯ ಸರ್ಕಾರಿ ಸಂಸ್ಥೆಗಳ ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಯೋಜನೆ

36. ನೆಲ್ಲಿಕ್ಕಂಪೆಟ್ಟಿ ಕ್ರೀಡಾ ಧಾಮ ಎಂದು ಹಿಂದೆ ಕರೆಯಲ್ಪಡುತ್ತಿದ್ದ ವನ್ಯಜೀವಿ ಅಭಯಾರಣ್ಯ

(A) ಮೇಘಮಲ ಹುಲಿ ಮೀಸಲು ಪ್ರದೇಶ

(B) ಪೆರಿಯಾರ್ ಹುಲಿ ಮೀಸಲು ಪ್ರದೇಶ

(C) ಆನಮಲ ಹುಲಿ ಮೀಸಲು ಪ್ರದೇಶ

(D) ಪರಂಬಿಕುಳಂ ಹುಲಿ ಮೀಸಲು ಪ್ರದೇಶ

37. ಭಾರತದ ಮೊದಲ ಸಂಪೂರ್ಣ ಡಿಜಿಟಲ್ ಸಾಕ್ಷರತಾ ಪಂಚಾಯತ್

(A) ಹೆಮನಮ್

(B) ಆನುರ್

(C) ಇರವಿಪೆರೂರ್

(D) ಪುಲ್ಲಂಪಾರಾ

38. ಸಾವಯವ ಪದಾರ್ಥಗಳಿಂದ ಸಮೃದ್ಧವಾಗಿರುವ ಮರಳು ಮಣ್ಣು ಕೇಸರಿ ಕೃಷಿಗೆ ಸೂಕ್ತವಾಗಿರುತ್ತದೆ ಮತ್ತು ಇದು ಕಾಶ್ಮೀರ ಕಣಿವೆಯ ಹಿಮನದಿಗಳಿಂದ ಸಂಗ್ರಹವಾಗುತ್ತದೆ

(A) ಕಪ್ಪು ಮಣ್ಣು

(B) ಕರೇವಾಸ್ ಮಣ್ಣು

(C) ಲ್ಯಾಟರೈಟ್ ಮಣ್ಣು

(D) ಕೆಂಪು ಮಣ್ಣು

39. ಗಾಳಿಯ ದಿಕ್ಕಿಗೆ ಎದುರಾಗಿರುವ ಪರ್ವತಗಳು ಗಾಳಿಯನ್ನು ತಡೆಯುವುದರಿಂದ ಆ ಪ್ರದೇಶಗಳು ಹೆಚ್ಚಿನ ಮಳೆಯನ್ನು ಪಡೆಯುತ್ತವೆ. ಆದ್ದರಿಂದ, ಇನ್ನೊಂದು ಬದಿಯಲ್ಲಿ ಮಳೆ ಕಡಿಮೆಯಾಗುತ್ತದೆ. ಅಂತಹ ಕಡಿಮೆ ಮಳೆಯಾಗುವ ಪ್ರದೇಶಗಳನ್ನು ಏನೆಂದು ಕರೆಯುವರು?

(A) ಸಮಶೀತೋಷ್ಣ ಮಳೆ ವಲಯಗಳು

(B) ಪರ್ವತ ಶರತ್ಕಾಲದ ಪ್ರದೇಶಗಳು

(C) ಮಳೆ ನೆರಳು ಪ್ರದೇಶಗಳು

(D) ಉಷ್ಣವಲಯದ ಮಳೆ ವಲಯಗಳು

40. ವೆಂಬನಾಡ್ ಸರೋವರದ ಬಗ್ಗೆ ನೀಡಲಾದ ತಪ್ಪಾದ ಮಾಹಿತಿಯನ್ನು ಗುರುತಿಸಿ

1. ಇದು ಕಲ್ಲಡಯಾರ್ ಜಲಪಾತವಿರುವ ಸ್ಥಳವಾಗಿದೆ

2. ನೆಹರು ಟ್ರೋಫಿ ದೋಣಿ ಸ್ಪರ್ಧೆ ನಡೆಯುವ ಸರೋವರ

3. ತನ್ನೀರ್‌ಮುಕ್ಕಂ ಬಂಡ್ ನಿರ್ಮಿಸಲಾಗಿದೆ

4. ಮಂಡ್ರೋ ತುರುತ್ ದ್ವೀಪ ಇರುವ ಸರೋವರ

(A) ಒಂದು ಮತ್ತು ನಾಲ್ಕು ತಪ್ಪಾಗಿದೆ

(B) ಒಂದು ಮತ್ತು ಎರಡು ತಪ್ಪಾಗಿದೆ

(C) ಎರಡು ಮತ್ತು ಮೂರು ತಪ್ಪಾಗಿದೆ

(D) ಮೂರು ಮತ್ತು ನಾಲ್ಕು ತಪ್ಪಾಗಿದೆ

41. “ಆಪರೇಷನ್ ಬ್ರಹ್ಮ” ಕಾರ್ಯಾಚರಣೆಯ ಉದ್ದೇಶ

(A) ಈ ಕಾರ್ಯಾಚರಣೆಯ ಉದ್ದೇಶ ಭೂಮಿಯ ಪ್ರದೇಶಗಳ ಮೇಲೆ ನೇರವಾಗಿ ಗಗನಯಾತ್ರಿಗಳನ್ನು ಸಾಗಿಸುವುದು

(B) ಇದು ಮ್ಯಾನ್ಮಾರ್ ನಲ್ಲಿ ಸಂಭವಿಸಿದ ಭೂಕಂಪದಲ್ಲಿ ತುರ್ತು ಮಾನವೀಯ ನೆರವು ನೀಡಲು ಭಾರತೀಯ ಸೇನೆಯು ಪ್ರಾರಂಭಿಸಿದ ಕಾರ್ಯಾಚರಣೆ

(C) ವಾಟ್ಸಾಪ್ ಮತ್ತು ಇತರ ಎಲೆಕ್ಟ್ರಾನಿಕ್ ವ್ಯವಸ್ಥೆಗಳ ಮೂಲಕ ಆಡಳಿತವನ್ನು ಸುಧಾರಿಸುವ ಗುರಿ ಹೊಂದಿದೆ

(D) ಭಾರತೀಯ ನಾಗರಿಕರಿಗೆ ಅಂತರರಾಷ್ಟ್ರೀಯ ಪ್ರಯಾಣವನ್ನು ಆಧುನೀಕರಿಸುವ ಗುರಿ ಹೊಂದಿದೆ

42. ಕೇರಳದ ಅತಿ ದೊಡ್ಡ ಮೀನುಗಾರಿಕೆ ಬಂದರು ಮತ್ತು ಇಂಡೋ-ನಾರ್ವೇಜಿಯನ್ ಯೋಜನೆ ಎಂದು ಕರೆಯಲ್ಪಡುವ ಬಂದರು

(A) ಥಂಕಸ್ಸೇರಿ

(B) ಕಾಯಂಕುಳಂ

(C) ವಿಳಿಂಜಮ್

(D) ನೀಂಡಕರ

43. ಕೇರಳದ ಅರಣ್ಯ ವ್ಯಾಪ್ತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

1. ಕೇರಳದಲ್ಲಿ ಅತಿ ಕಡಿಮೆ ಅರಣ್ಯ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆ ಎರ್ನಾಕುಳಂ

2. ಕೇರಳ ಅರಣ್ಯ ಸಂಶೋಧನಾ ಸಂಸ್ಥೆಯ ಪ್ರಧಾನ ಕಚೇರಿ ಕೊಚ್ಚಿ

3. ಸೈಲೆಂಟ್ ವ್ಯಾಲಿ ಉಷ್ಣವಲಯದ ನಿತ್ಯಹರಿದ್ವರ್ಣ ಅರಣ್ಯವಾಗಿದೆ

4. ಕೇರಳದಲ್ಲಿ ಅತಿ ಹೆಚ್ಚು ಅರಣ್ಯ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆ ಇಡುಕ್ಕಿ

(A) ಮೂರು ಮತ್ತು ನಾಲ್ಕು ಸರಿಯಾಗಿವೆ

(B) ಎರಡು ಮತ್ತು ಮೂರು ಸರಿಯಾಗಿವೆ

(C) ಒಂದು ಮತ್ತು ನಾಲ್ಕು ಸರಿಯಾಗಿವೆ

(D) ಎರಡು ಮತ್ತು ನಾಲ್ಕು ಸರಿಯಾಗಿವೆ

44. ಈ ಕೆಳಗಿನವುಗಳನ್ನು ಹೊಂದಿಸಿ:

| ಪಟ್ಟಿ 1 | ಪಟ್ಟಿ 2 |
|---|---|
| 1. ಕರುಮಾಡಿಕುಟ್ಟನ್ ಸ್ಮಾರಕ | (i) ಕೊಲ್ಲಂ |
| 2. ಚಂದ್ರಗಿರಿ ಕೋಟೆ | (ii) ಮಲಪ್ಪುರಂ |
| 3. ಪುನಲೂರು ತೂಗು ಸೇತುವೆ | (iii) ಆಲಪ್ಪುಳ |
| 4. ವ್ಯಾಗನ್ ದುರಂತ ಸ್ಮಾರಕ | (iv) ಕಾಸರಗೋಡು |

(A) 1–(i) 2 – (ii) 3 – (iii) 4–(iv)

(B) 1–(ii) 2 – (iii) 3 – (iv) 4–(i)

(C) 1–(iii) 2 – (iv) 3 – (i) 4–(ii)

(D) 1–(iv) 2 – (i) 3 – (ii) 4–(iii)

45. ಈ ಕೆಳಗೆ ನೀಡಲಾದವುಗಳಿಂದ ಸರಿಯಾದ ಉತ್ತರಗಳನ್ನು ಹುಡುಕಿ

1. ಬಾಕ್ಸರ್ ದಂಗೆ – ಅಮೇರಿಕ

2. ಬೋಯರ್ ಯುದ್ಧ – ದಕ್ಷಿಣ ಆಫ್ರಿಕಾ

3. ಟೆನ್ನಿಸ್ ಕೋರ್ಟ್ ದಂಗೆ – ಚೈನಾ

4. ರಕ್ತರಹಿತ ಕ್ರಾಂತಿ – ಇಂಗ್ಲೆಂಡ್

(A) 1, 2 ಮತ್ತು 4 ಸರಿಯಾಗಿವೆ

(B) 1, 2 ಮತ್ತು 3 ಸರಿಯಾಗಿವೆ

(C) 1 ಮತ್ತು 4 ಸರಿಯಾಗಿವೆ

(D) 2 ಮತ್ತು 4 ಸರಿಯಾಗಿವೆ

46. ಯಾವ ಸಂಸ್ಕೃತ ಕವಿತೆ ಕೋಯಿಕೋಡ್ ಅನ್ನು ಉಲ್ಲೇಖಿಸುತ್ತದೆ?

(A) ಉನ್ನುನೀಲಿ ಸಂದೇಶಂ

(B) ಚಾತಕ ಸಂದೇಶಂ

(C) ಮಯೂರ ಸಂದೇಶಂ

(D) ಕೋಕಿಲಾ ಸಂದೇಶಂ

47. ಭೂಮಿಯ ಒಳಭಾಗದ ವಿವಿಧ ಪದರಗಳ ಹೆಸರುಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಮೇಲ್ಮೈಯಿಂದ ಒಳಗಿನವರೆಗೆ ಕ್ರಮವಾಗಿ ಬರೆಯಿರಿ

(A) ಕ್ರಸ್ಟ್– ಒಳಗಿನ ಪದರ – ಹೊರಗಿನ ಪದರ – ಮ್ಯಾಂಟಲ್

(B) ಕ್ರಸ್ಟ್– ಮ್ಯಾಂಟಲ್– ಹೊರಗಿನ ಪದರ – ಒಳಗಿನ ಪದರ

(C) ಕ್ರಸ್ಟ್– ಮ್ಯಾಂಟಲ್– ಒಳಗಿನ ಪದರ – ಹೊರಗಿನ ಪದರ

(D) ಒಳಗಿನ ಪದರ – ಹೊರಗಿನ ಪದರ – ಮ್ಯಾಂಟಲ್– ಕ್ರಸ್ಟ್

48. ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪು ಹೇಳಿಕೆಗಳನ್ನು ಹುಡುಕಿ

(i) ರಾಜ್ಯ ಸರ್ಕಾರಗಳಿಗೆ ಮಾತ್ರ ಕೆಲವು ಅಧಿಕಾರಗಳಿವೆ

(ii) 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಮತದಾನದ ಹಕ್ಕಿದೆ

(iii) ಯಾರೂ ಕಾನೂನಿಗಿಂತ ಮೇಲಲ್ಲ

(iv) ಭಾರತದಲ್ಲಿ ಒಬ್ಬ ವ್ಯಕ್ತಿಯು ರಾಷ್ಟ್ರೀಯ ಪೌರತ್ವದ ಜೊತೆಗೆ ರಾಜ್ಯ ಪೌರತ್ವವನ್ನು ಹೊಂದಬಹುದು

(v) ನಮಗೆ ಹಕ್ಕುಗಳಿರುವಂತೆ, ಕರ್ತವ್ಯಗಳೂ ಇವೆ

(vi) ನಮ್ಮ ಆಡಳಿತಗಾರರ ಮೇಲೆ ಯಾರಿಗೂ ಯಾವುದೇ ನಿಯಂತ್ರಣವಿಲ್ಲ

(A) i, ii ಮತ್ತು iv ತಪ್ಪು

(B) vi ಮತ್ತು v ತಪ್ಪು

(C) i, iv ಮತ್ತು vi ತಪ್ಪು

(D) ii, iii ಮತ್ತು v ತಪ್ಪು

49. ಮಾರ್ಚ್2025 ರಲ್ಲಿ ನಿಧನರಾದ ವಾಲ್ಕಿಲ್ಮಾರ್ ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ?

(A) ಸಾಹಿತ್ಯ

(B) ವಿಜ್ಞಾನ

(C) ಚಲನಚಿತ್ರ ಉದ್ಯಮ

(D) ಪತ್ರಿಕೋದ್ಯಮ

50. 2024 ರಲ್ಲಿ ಮಾತೃಭೂಮಿ ಸಾಹಿತ್ಯ ಪ್ರಶಸ್ತಿಯನ್ನು ಯಾರು ಗೆದ್ದರು?

(A) ಅಶೋಕನ್ ಚರುವಿಲ್

(B) ಎಂ. ಕೆ. ಸಾನು

(C) ಎನ್.ಎಸ್.ಮಾಧವನ್

(D) ಸಾರಾ ಜೋಸೆಫ್

51. ಮಹಿಳೆಯರಿಗಾಗಿ ಸುಭದ್ರಾ ಯೋಜನೆ ಎಂಬ ಯೋಜನೆಯನ್ನು ಪ್ರಾರಂಭಿಸಿದ ರಾಜ್ಯ ಯಾವುದು?

(A) ಮಹಾರಾಷ್ಟ್ರ

(B) ಒರಿಸ್ಸಾ

(C) ಕೇರಳ

(D) ತಮಿಳುನಾಡು

52. ರಾಜ್ಯದ ಮೊದಲ ಸಾಹಸ ಪ್ರವಾಸೋದ್ಯಮ ಅಕಾಡೆಮಿ ಮತ್ತು ಉದ್ಯಾನವನವು ಎಲ್ಲಿ ಅಸ್ತಿತ್ವಕ್ಕೆ ಬರಲಿದೆ?

(A) ವಿಳಿಂಜಂ

(B) ಶಾಸ್ತಾಂಪರ

(C) ಇಡಮಲಕುಡಿ

(D) ಅರುವಿಕ್ಕರ

53. ಬಿಳಿಶಿಲೀಂಧ್ರ ಯಾವ ಗುಂಪಿಗೆ ಸೇರಿದೆ?

(A) ಬ್ಯಾಕ್ಟೀರಿಯಾ

(B) ವೈರಸ್

(C) ಶಿಲೀಂಧ್ರ

(D) ಪ್ರೊಟೊಜೋವಾ

54. ಸರ್ಪೆಂಟೈನ್ ಪದರಗಳನ್ನು (Serpentine layering) ನಿರ್ವಹಿಸುವ ಸಸ್ಯಕ್ಕೆ ಒಂದು ಉದಾಹರಣೆ

(A) ಪೇರಳೆ

(B) ಚಂಪಾ

(C) ಗುಲಾಬಿ

(D) ಕರಿಮೆಣಸು

55. ಮಾನವ ದೇಹದಲ್ಲಿ ಆಂತರಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಮೆದುಳಿನ ಭಾಗವೆಂದರೆ

(A) ಹೈಪೋಥಾಲಮಸ್

(B) ಥಾಲಾಮಸ್

(C) ಸೆರೆಬ್ರಮ್

(D) ಸೆರೆಬೆಲ್ಲಮ್ (ಕಿರುಮೆದುಳು)

56. ಕೇಂದ್ರ ಗೆಡ್ಡೆ ಸಂಶೋಧನಾ ಕೇಂದ್ರ ಇರುವ ಜಿಲ್ಲೆ

(A) ಕಾಸರಗೋಡು

(B) ವಯನಾಡು

(C) ತಿರುವನಂತಪುರಂ

(D) ಎರ್ನಾಕುಳಂ

57. "ಆಸ್ಕೋರ್ಬಿಕ್ ಆಮ್ಲ" ಎಂದು ಕರೆಯಲ್ಪಡುವ ವಿಟಮಿನ್

(A) ವಿಟಮಿನ್ ಎ

(B) ವಿಟಮಿನ್ ಇ

(C) ವಿಟಮಿನ್ ಸಿ

(D) ವಿಟಮಿನ್ ಬಿ

58. "ಶಿಮ್ಲಾ ಒಪ್ಪಂದ" ವು ಯಾವ ದೇಶಗಳ ನಡುವಿನ ಒಪ್ಪಂದವಾಗಿದೆ?

(A) ಭಾರತ – ಪಾಕಿಸ್ತಾನ

(B) ಭಾರತ – ಚೀನಾ

(C) ಭಾರತ – ಭೂತಾನ್

(D) ಭಾರತ – ಮ್ಯಾನ್ಮಾರ್

59. ಯುನೆಸ್ಕೋದಿಂದ ಗುರುತಿಸಲ್ಪಟ್ಟ ಕೇರಳದ ಕಲಾ ಪ್ರಕಾರಗಳು

(i) ಕೂಡಿಯಾಟಂ

(ii) ಮೋಹಿನಿಯಾಟ್ಟಂ

(iii) ಕಥಕ್ಕಳಿ

(iv) ಓಟ್ಟಂತುಳ್ಳಲ್

(A) i, iii

(B) ii, iv

(C) ii, iii

(D) i ಮಾತ್ರ ಸರಿಯಾಗಿದೆ

60. ಪೀನ (ಕಾನ್ವೆಕ್ಸ್) ಕನ್ನಡಿಗಳ ಕುರಿತು ಈ ಕೆಳಗಿನವುಗಳಿಂದ ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ

(i) ಇವು ಒಳಮುಖವಾಗಿ ಕಾನ್ಕೇವ್ ಮೇಲ್ಮೈ ಹೊಂದಿರುವ ಗೋಳಾಕಾರದ ಕನ್ನಡಿಗಳು.

(ii) ಇವುಗಳನ್ನು ವಾಹನಗಳಲ್ಲಿ ಹಿಂಬದಿಯ ನೋಟದ ಕನ್ನಡಿಗಳಾಗಿ ಬಳಸಲಾಗುತ್ತದೆ.

(iii) ಇವುಗಳನ್ನು ಶೇವಿಂಗ್ ಕನ್ನಡಿಗಳಾಗಿ ಬಳಸಲಾಗುತ್ತದೆ.

(iv) ಇವು ಕಾನ್ಕೇವ್ ಮೇಲ್ಮೈ ಹೊಂದಿರುವ ಗೋಳಾಕಾರದ ಕನ್ನಡಿಗಳು.

(A) ಎರಡು ಮತ್ತು ನಾಲ್ಕು ಹೇಳಿಕೆಗಳು

(B) ಒಂದು ಮತ್ತು ಮೂರು ಹೇಳಿಕೆಗಳು

(C) ಮೂರು ಮತ್ತು ನಾಲ್ಕು ಹೇಳಿಕೆಗಳು

(D) ಒಂದು ಮತ್ತು ಎರಡು ಹೇಳಿಕೆಗಳು

61. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಿ ವಿಜ್ಞಾನಿಗಳು ಮತ್ತು ಸಂಶೋಧನೆಗಳನ್ನು ಹುಡುಕಿ

(i) ಎಲೆಕ್ಟ್ರಾನ್ – ಜೆ. ಜೆ. ಥಾಮ್ಸನ್

(ii) ಪ್ರೋಟಾನ್ – ಜೇಮ್ಸ್ ಚಾಡಿಕ್ವ್

(iii) ನ್ಯೂಟ್ರಾನ್ – ರೂದರ್‌ಫೋರ್ಡ್

(A) (iii) ಮಾತ್ರ

(B) (i) ಮಾತ್ರ

(C) (i) ಮತ್ತು (ii)

(D) ಎಲ್ಲವೂ ಸರಿಯಾಗಿವೆ

62. ಈ ಕೆಳಗಿನ ಯಾವ ವಸ್ತುಗಳಿಂದ ಸತುವನ್ನು ಅತ್ಯಂತ ಸುಲಭ, ವೇಗ ಮತ್ತು ಅಗ್ಗದ ರೀತಿಯಲ್ಲಿ ಹೊರತೆಗೆಯಬಹುದು?

(A) ಬಾಕ್ಸೈಟ್

(B) ಟಿನ್‌ಸ್ಟೋನ್

(C) ಕ್ಯಾಲಮೈನ್

(D) ಇವುಗಳಲ್ಲಿ ಯಾವುದೂ ಅಲ್ಲ

63. ಈ ಕೆಳಗಿನ ಹೇಳಿಕೆಗಳು ಯಾವ ಅಂಶವನ್ನು ಉಲ್ಲೇಖಿಸುತ್ತವೆ?

(i) ನ್ಯೂಟ್ರಾನ್‌ಗಳು ಕಂಡುಬರುವುದಿಲ್ಲ

(ii) ದ್ರವ್ಯರಾಶಿ ಸಂಖ್ಯೆ 1

(iii) ಈ ಅಂಶವನ್ನು ಹೆನ್ರಿ ಕ್ಯಾವೆಂಡಿಷ್ ಕಂಡುಹಿಡಿದರು

(A) ಹೀಲಿಯಂ

(B) ಹೈಡ್ರೋಜನ್

(C) ಆಮ್ಲಜನಕ

(D) ಜಿರ್ಕೋನಿಯಮ್

64. ಶಾಖ ವರ್ಗಾವಣೆಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳಿಂದ ಸರಿಯಾದುದನ್ನು ಆರಿಸಿ

(i) ಅಣುಗಳ ನಿಜವಾದ ಸ್ಥಳಾಂತರದಿಂದ ಶಾಖವನ್ನು ವರ್ಗಾಯಿಸಲಾಗುತ್ತದೆ

(ii) ಅಣುಗಳ ನಿಜವಾದ ಸ್ಥಳಾಂತರವಿಲ್ಲದೆ ಶಾಖವನ್ನು ವರ್ಗಾಯಿಸಲಾಗುತ್ತದೆ

(iii) ಮಾಧ್ಯಮದ ಸಹಾಯವಿಲ್ಲದೆ ಶಾಖವನ್ನು ವರ್ಗಾಯಿಸಲಾಗುತ್ತದೆ

(A) ಒಂದು ಮತ್ತು ಎರಡು ಹೇಳಿಕೆಗಳು

(B) ಎರಡು ಮತ್ತು ಮೂರು ಹೇಳಿಕೆಗಳು

(C) ಇವುಗಳಲ್ಲಿ ಯಾವುದೂ ಅಲ್ಲ

(D) ಎಲ್ಲವೂ ಸರಿಯಾಗಿವೆ

65. 2023 ರ ರಸಾಯನಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಯಾವುದರ ಆವಿಷ್ಕಾರಕ್ಕಾಗಿ ನೀಡಲಾಯಿತು?

(A) ಕೋವಿಡ್ ಲಸಿಕೆ

(B) ಎಲೆಕ್ಟ್ರೋಫೈಲ್

(C) ಕ್ವಾಂಟಮ್ ಡಾಟ್

(D) ನ್ಯೂಕ್ಲಿಯೋಫೈಲ್

66. ಡಿ.ಆರ್.ಡಿ.ಒ. ದ ಪ್ರಸ್ತುತ ಅಧ್ಯಕ್ಷರು ಯಾರು?

(A) ಜಿ. ಸತೀಶ್ ರೆಡ್ಡಿ

(B) ಎಸ್.ಕ್ರಿಸ್ಟೋಫರ್

(C) ಎಂ. ನಟರಾಜನ್

(D) ಡಾ. ಸಮೀರ್. ವಿ. ಕಾಮತ್

67. ಈ ಕೆಳಗಿನವುಗಳಲ್ಲಿ ಯಾವುದು ಭಾರತದಲ್ಲಿ ಪರಿಸರ ಸ್ನೇಹಿ ತಾಣವಲ್ಲ?

(A) ಪಶ್ಚಿಮ ಘಟ್ಟಗಳು

(B) ಸುಂದಲ್ಯಾಂಡ್

(C) ಇಂಡೋ–ಬರ್ಮಾ

(D) ಈಶಾನ್ಯ ಹಿಮಾಲಯ

68. ಮಲೇರಿಯಾಕ್ಕೆ ಕಾರಣವಾಗುವ ಪ್ಲಾಸ್ಮೋಡಿಯಂ ಯಾವ ಗುಂಪಿಗೆ ಸೇರಿದೆ?

(A) ಬ್ಯಾಕ್ಟೀರಿಯಾ

(B) ಶಿಲೀಂಧ್ರ

(C) ಪ್ರೋಟೋಜೋವಾ

(D) ವೈರಸ್

69. ವೈಡಲ್ ಪರೀಕ್ಷೆಯಿಂದ ಯಾವ ರೋಗಕಾರಕವನ್ನು ಗುರುತಿಸಲಾಗುತ್ತದೆ?

(A) ಹಿಮೋಫಿಲಸ್ ಇನ್‌ಫ್ಲುಯೆನ್ಜೇ

(B) ಸಾಲ್ಮೊನೆಲ್ಲಾ ಟೈಫಿ

(C) ಪ್ಲಾಸ್ಮೋಡಿಯಂ ಫಾಲ್ಸಿಪಾರಮ್

(D) ಸ್ಟ್ರೆಪ್ಟೋಕಾಕಸ್ ನ್ಯುಮೋನಿಯೇ

70. ರಕ್ತದಲ್ಲಿ ಯಾವ ಫ್ಯಾಗೋಸೈಟಿಕ್(ಭಕ್ಷಕ) ಕೋಶ ಕಂಡು ಬರುತ್ತದೆ?

(A) ಇಸಿನೋಫಿಲ್

(B) ಲಿಂಫೋಸೈಟ್

(C) ಮೋನೋಸೈಟ್

(D) ಬ್ಯಾಸೋಫಿಲ್

71. ಒಂದು ಹೃದಯ ಚಕ್ರವನ್ನು ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ?

(A) 0.2 ಸೆಕೆಂಡ್ (B) 0.6 ಸೆಕೆಂಡ್

(C) 0.9 ಸೆಕೆಂಡ್ (D) 0.8 ಸೆಕೆಂಡ್

72. ಲೆಪ್ಟೋಸ್ಪೈರೋಸಿಸ್‌ಗೆ ಕಾರಣವಾಗುವ ರೋಗಕಾರಕದ ಹೆಸರೇನು?

(A) ಲೆಪ್ಟೋಸ್ಪೈರಾ

(B) ಕೊರಿನ್‌ಬ್ಯಾಕ್ಟೀರಿಯಂ

(C) ಮೈಕೋಬ್ಯಾಕ್ಟೀರಿಯಂ

(D) ಸ್ಟ್ರೆಪ್ಟೋಕಾಕಸ್

73. ಕ್ಷಯ ರೋಗವನ್ನು ತಡೆಗಟ್ಟಲು ಬಳಸುವ ಲಸಿಕೆಯ ಹೆಸರೇನು?

(A) ಡಿ. ಪಿ. ಟಿ. (B) ಎಂ. ಎಂ. ಆರ್.

(C) ಹೆಚ್.ಪಿ. ವಿ. (D) ಬಿ. ಸಿ. ಜಿ.

74. ರಕ್ತದಲ್ಲಿನ ಕ್ಯಾಲ್ಸಿಯಂ ನ ಸಾಮಾನ್ಯ ಮಟ್ಟ ಎಷ್ಟು?

(A) 70 – 110 ಮಿಲಿಗ್ರಾಂ

(B) 9 – 11 ಮಿಲಿಗ್ರಾಂ

(C) 200 – 400 ಮಿಲಿಗ್ರಾಂ

(D) 12 – 17 ಮಿಲಿಗ್ರಾಂ

75. ಮೆದುಳನ್ನು ಆವರಿಸಿರುವ ಪೊರೆ ಯಾವುದು?

(A) ಪೆರಿಕಾರ್ಡಿಯಂ
(B) ಪ್ಲೂರಾ
(C) ಮೆನಿಂಜಸ್
(D) ಕಾರ್ಟೆಕ್ಸ್

76. ಗಾಯದ ಸಂದರ್ಭದಲ್ಲಿ ರಕ್ತದ ಹೆಪ್ಪುಗಟ್ಟುವಿಕೆಗೆ ಯಾವ ವಿಟಮಿನ್ ಸಹಾಯ ಮಾಡುತ್ತದೆ?

(A) ವಿಟಮಿನ್ ಇ
(B) ವಿಟಮಿನ್ ಬಿ
(C) ವಿಟಮಿನ್ ಡಿ
(D) ವಿಟಮಿನ್ ಕೆ

77. ವಿಶ್ವಪ್ರಕೃತಿ ಸಂರಕ್ಷಣಾ ದಿನ ಯಾವಾಗ?

(A) ಜೂನ್ 5
(B) ಮೇ 22
(C) ಜುಲೈ 28
(D) ಜೂನ್ 1

78. ಮಧುಮೇಹದಿಂದ ಬಳಲುತ್ತಿರುವ ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಲು ಕೇರಳ ಆರೋಗ್ಯ ಇಲಾಖೆಯು ಯಾವ ಯೋಜನೆಯನ್ನು ರೂಪಿಸಿದೆ?

(A) ತೇನ್ ಅಮೃತ್
(B) ಮಿಠಾಯಿ
(C) ಹೃದ್ಯಮ್
(D) ಆರ್ದ್ರಮ್

79. ಯಾವ ರೋಗಕಾರಕವು ಅಮೀಬಿಕ್ ಮೆನಿಂಗೋಎನ್ಸೆಫಲೈಟಿಸ್‌ಗೆ ಕಾರಣವಾಗುತ್ತದೆ?

(A) ಟ್ರೈಪಾನೋಸೋಮಾ ಗ್ಯಾಂಬಿಯೆನ್ಸ್
(B) ಪ್ಲಾಸ್ಮೋಡಿಯಂ ಫಾಲ್ಸಿಪ್ಯಾರಮ್
(C) ನೀಸೇರಿಯಾ ಫೌಲೆರಿ
(D) ವರಿಸೆಲ್ಲಾ ಜೋಸ್ಟರ್

80. 2023ರಲ್ಲಿ ಕೇರಳದಲ್ಲಿನ ಆರೋಗ್ಯ ವಲಯದಲ್ಲಿ ನವೀನ ತಂತ್ರಜ್ಞಾನಗಳಿಗಾಗಿ ಡಿಜಿಟಲ್ ಟ್ರಾನ್ಸ್‌ಫಾರ್ಮೇಷನ್ ಪ್ರಶಸ್ತಿಯನ್ನು ಪಡೆದ ಆರೋಗ್ಯ ಯೋಜನೆ ಯಾವುದು?

(A) ಆಶಾಧಾರ
(B) ಅನುಯಾತ್ರ
(C) ಶ್ರುತಿ ತರಂಗಂ
(D) ಆರೋಗ್ಯ ಕಿರಣಂ

81. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ?

(A) 12 + 15 = 37
(B) 25 − 7 = 19
(C) 9 x 6 = 54
(D) 8 ÷ 2 = 5

82. 20 ಮತ್ತು 30 ರ ಸಾಮಾನ್ಯ ಭೇದವು 10 ಆಗಿದ್ದರೆ, ಅವುಗಳ ಸಾಮಾನ್ಯ ಭೇದ ಯಾವುದು?

(A) 60
(B) 30
(C) 20
(D) 100

83. 8/3 ರಲ್ಲಿ 3/4 ಎಂದರೇನು?

(A) 3
(B) 2
(C) 4
(D) 1

84. 726 ಸೆಂ. ಮೀ ಉದ್ದದ ಹಗ್ಗವನ್ನು 100 ಸಮಾನ ಭಾಗಗಳಾಗಿ ಕತ್ತರಿಸಿದರೆ, ಪ್ರತಿಯೊಂದು ತುಂಡಿನ ಉದ್ದ ಎಷ್ಟು?

(A) 7.26 ಸೆಂ. ಮೀ
(B) 72.6 ಸೆಂ. ಮೀ
(C) 72600 ಸೆಂ. ಮೀ
(D) 0.726 ಸೆಂ. ಮೀ

85. $8^2 + 9^2$ ರ ಮೌಲ್ಯವನ್ನು ಕಂಡು ಹಿಡಿಯಿರಿ

(A) 100
(B) 145
(C) 113
(D) 34

86. ಆರು ಪಂದ್ಯಗಳಲ್ಲಿ ಬ್ಯಾಸ್ಕೆಟ್ ಬಾಲ್ ಆಟಗಾರನ ಸರಾಸರಿ ಸ್ಕೋರ್ 18 ಅಂಕಗಳು. ಮುಂದಿನ ಪಂದ್ಯದಲ್ಲಿ ಅವನು 25 ಅಂಕಗಳನ್ನು ಗಳಿಸಿದರೆ ಹೊಸ ಸರಾಸರಿ ಸ್ಕೋರ್ ಎಷ್ಟು?

(A) 18
(B) 20
(C) 19
(D) 21


87. $\sqrt{64} + \sqrt{100}$ ರ ಮೌಲ್ಯ ಎಷ್ಟು?

(A) 9
(B) 8
(C) 15
(D) 18

88. ಒಬ್ಬ ವ್ಯಕ್ತಿಯು 1200 ರೂಪಾಯಿಗಳಿಗೆ ತಂದ ಗೃಹೋಪಯೋಗಿ ಉಪಕರಣವನ್ನು 1500 ರೂಪಾಯಿಗಳಿಗೆ ಮಾರಾಟ ಮಾಡಿದರೆ ಲಾಭದ ಶೇಕಡಾವಾರು ಎಷ್ಟು?

(A) 30%
(B) 25%
(C) 20%
(D) 15%

89. ಚಿತ್ರದಲ್ಲಿ ಗುರುತಿಸಲಾದ ಕೋನವನ್ನು ನೋಡಿ




(A) 60°
(B) 70°
(C) 50°
(D) 90°

90. ಒಬ್ಬ ಸೈಕಲ್ ಸವಾರನು 3 ಗಂಟೆಗಳಲ್ಲಿ 45 ಕಿ. ಮೀ ದೂರ ಕ್ರಮಿಸಿದರೆ, ಅವನ ಸರಾಸರಿ ವೇಗ ಎಷ್ಟು?

(A) 12 ಕಿ.ಮೀ / ಗಂ
(B) 13 ಕಿ.ಮೀ / ಗಂ
(C) 14 ಕಿ.ಮೀ / ಗಂ
(D) 15 ಕಿ.ಮೀ / ಗಂ

91. $(5 + 3) \div 2 + 4^2$ ರ ಮೌಲ್ಯವನ್ನು ಕಂಡು ಹಿಡಿಯಿರಿ

(A) 20
(B) 16
(C) 18
(D) 19

92. ಈ ಕೆಳಗೆ ಕೊಟ್ಟಿರುವ ಅನುಕ್ರಮದಲ್ಲಿ ಮುಂದಿನ ಸಂಖ್ಯೆ ಯಾವುದು?

2, 6, 12, 20, —?

(A) 24
(B) 30
(C) 28
(D) 36

93. ಈ ಕೆಳಗಿನ ಸಂಖ್ಯೆಗಳಲ್ಲಿ ಅವಿಭಾಜ್ಯ ಸಂಖ್ಯೆಗಳ ಗುಂಪನ್ನು ಗುರುತಿಸಿ

(A) 2, 3, 5, 6
(B) 1, 7, 11, 13
(C) 2,3, 5, 11
(D) 4, 6, 8, 9

94. ಶೂನ್ಯ ಯಾವ ರೀತಿಯ ಸಂಖ್ಯೆಯಾಗಿದೆ?

(i) ಪೂರ್ಣಾಂಕ

(ii) ಎಣಿಕೆಯ ಸಂಖ್ಯೆ

(iii) ರೇಖೀಯ ಸಂಖ್ಯೆ

(A) (i), (ii) ಮತ್ತು (iii) ಸರಿಯಾಗಿವೆ
(B) (i) ಮತ್ತು (ii) ಸರಿಯಾಗಿವೆ
(C) (ii) ಮತ್ತು (iii) ಸರಿಯಾಗಿವೆ
(D) (i) ಮತ್ತು (iii) ಸರಿಯಾಗಿವೆ

95. ಈ ಕೆಳಗಿನವುಗಳಲ್ಲಿ ವಿಭಿನ್ನವಾದದ್ದನ್ನು ಹುಡುಕಿ

(A) 36 (B) 25

(C) 28 (D) 49

96. ಈ ಕೆಳಗಿನ ಅಕ್ಷರಗಳನ್ನು ಅರ್ಥಪೂರ್ಣ ರೀತಿಯಲ್ಲಿ ಜೋಡಿಸಿ ಮತ್ತು ಗಣಿತದ ಉಪಕರಣದ ಹೆಸರನ್ನು ಬರೆಯಿರಿ

TCROPROTAR

(A) Parallel (ಸಮಾನಾಂತರ)

(B) Protractor (ಪ್ರೊಟ್ರಾಕ್ಟರ್)

(C) Graph (ಗ್ರಾಫ್)

(D) Calculator (ಕ್ಯಾಲ್ಕುಲೇಟರ್)

97. ಸೀತೆಯ ವಯಸ್ಸು ತನ್ನ ಮಗನ ವಯಸ್ಸಿನ ಮೂರು ಪಟ್ಟು. ಅವರ ವಯಸ್ಸಿನ ಮೊತ್ತ 60. ಮಗನ ವಯಸ್ಸು ಎಷ್ಟು?

(A) 10 (B) 20

(C) 15 (D) 25

98. ಬೆಳಿಗ್ಗೆ 10.00 ಗಂಟೆಗೆ ಬಸ್ ನಿಲ್ದಾಣದಿಂದ ಹೊರಡುವ ಬಸ್ ಮಧ್ಯಾಹ್ನ 1.00 ಗಂಟೆಗೆ ತಾನು ತಲುಪಬೇಕಾದ ಸ್ಥಳವನ್ನು ತಲುಪುತ್ತದೆ. ಹಾಗಾದರೆ ಪ್ರಯಾಣಕ್ಕೆ ತೆಗೆದುಕೊಳ್ಳುವ ಸಮಯ ಎಷ್ಟು?

(A) 2 ಗಂಟೆಗಳು

(B) 3 ಗಂಟೆಗಳು

(C) 4 ಗಂಟೆಗಳು

(D) 5 ಗಂಟೆಗಳು

99. 3/2 ಕಿಲೋಗ್ರಾಂಗಳ 10 ಪಟ್ಟು ಎಂದರೆ ಎಷ್ಟು ಕಿಲೋಗ್ರಾಂಗಳು?

(A) 5 (B) 16

(C) 15 (D) 6

100. 65 ವಿದ್ಯಾರ್ಥಿಗಳ ತರಗತಿಯಲ್ಲಿ , ಸಿದ್ಧಾರ್ಥ್ ಮುಂಭಾಗದಿಂದ 37 ನೇ ಸ್ಥಾನದಲ್ಲಿದ್ದಾನೆ. ಹಾಗಾದರೆ ಹಿಂದಿನಿಂದ ಸಿದ್ಧಾರ್ಥ್‌ನ ಸ್ಥಾನ ಎಷ್ಟು?

(A) 25 (B) 26

(C) 29 (D) 28

___________

SPACE FOR ROUGH WORK

## SPACE FOR ROUGH WORK